# D

# CCE PR
## UNREVISED

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2019**

**S.S.L.C. EXAMINATION, JUNE, 2019**

**ಮಾದರಿ ಉತ್ತರಗಳು**

**MODEL ANSWERS**

ದಿನಾಂಕ : 24. 06. 2019 ] **ಸಂಕೇತ ಸಂಖ್ಯೆ : 83-K (Bio.)**

Date : 24. 06. 2019 ] **CODE NO. : 83-K (Bio.)**

## ವಿಷಯ : ವಿಜ್ಞಾನ

## Subject : SCIENCE

**(ಜೀವಶಾಸ್ತ್ರ / Biology)**

**(ಕನ್ನಡ ಭಾಷಾಂತರ / Kannada Version)**

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**


**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಟ್ರೆಪೋನೀಮಾ ಪ್ಯಾಲಿಡಂ ಜೀವಿಯಿಂದ ಉಂಟಾಗುವ ರೋಗ<br>(A) ಗೊನೋರಿಯಾ (B) ಪ್ರಜನನಾಂಗಗಳ ಹರ್ಪಿಸ್<br>(C) ಸಿಫಿಲಿಸ್ (D) ಹೆಪಟೈಟಿಸ್–ಬಿ<br>***ಉತ್ತರ :*** (C) ಸಿಫಿಲಿಸ್ | 1 |
| 6. | ಸಸ್ಯದ ಬೆಳವಣಿಗೆಯನ್ನು ಕುಂಠಿತಗೊಳಿಸುವ ಹಾರ್ಮೋನ್<br>(A) ಆಕ್ಸಿನ್ (B) ಜಿಬ್ಬರೆಲ್ಲಿನ್<br>(C) ಸೈಟೋಕೈನಿನ್ (D) ಆಬ್ಸಿಸಿಕ್ ಆಮ್ಲ<br>***ಉತ್ತರ :*** (D) ಆಬ್ಸಿಸಿಕ್ ಆಮ್ಲ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಅಂತರ್‌ಕೋಶಾವಕಾಶಗಳಲ್ಲಿ ಗಾಳಿಯನ್ನು ತುಂಬಿಕೊಂಡಿರುವ ಪೇರಂಕೈಮ ಅಂಗಾಂಶ | |
| | (A) ಕ್ಲೋರಂಕೈಮ | |
| | (B) ಏರಂಕೈಮ | |
| | (C) ಸ್ಕ್ಲೀರಂಕೈಮ | |
| | (D) ಕೋಲಂಕೈಮ | |
| | ***ಉತ್ತರ :*** (B) ಏರಂಕೈಮ | 1 |
| 10. | ಮೆಂಡಲ್‌ರ ಏಕತಳೀಕರಣ ಪ್ರಯೋಗದಲ್ಲಿ ಜೀನ್ ನಮೂನೆ ಅನುಪಾತದ ಸಸ್ಯಗಳ ವಿಧಗಳು | |
| | (A) 3 ಎತ್ತರ, 1 ಗಿಡ್ಡ | |
| | (B) 1 ಶುದ್ಧ ಎತ್ತರ, 2 ಎತ್ತರ, 1 ಶುದ್ಧ ಗಿಡ್ಡ | |
| | (C) 1 ಎತ್ತರ, 2 ಶುದ ಎತ್ತರ, 1 ಶುದ್ಧ ಗಿಡ್ಡ | |
| | (D) 1 ಎತ್ತರ, 3 ಶುದ್ಧ ಗಿಡ್ಡ | |
| | ***ಉತ್ತರ :*** (B) 1 ಶುದ್ಧ ಎತ್ತರ, 2 ಎತ್ತರ, 1 ಶುದ್ಧ ಗಿಡ್ಡ | 1 |
| 12. | ಅಸ್ಥಿಮಜ್ಜೆಯ ಕಾರ್ಯವೇನು ? | |
| | ***ಉತ್ತರ :*** | |
| | ಅಸ್ಥಿಮಜ್ಜೆಯು ರಕ್ತದ ಕೋಶಗಳನ್ನು ಉತ್ಪಾದಿಸುತ್ತದೆ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 16. | ವಿಕಿರಣಗಳು ಜೈವಿಕ ಅಣುಗಳೊಂದಿಗೆ ಪ್ರತಿವರ್ತಿಸಿದಾಗ ಆಗುವ ಪರಿಣಾಮವೇನು ?<br>***ಉತ್ತರ :***<br>i) ಉತ್ಪರಿವರ್ತನೆ ಉಂಟಾಗುವುದು. ½<br>ii) ಡಿ.ಎನ್.ಎ. ಅಣುವಿಗೆ ಹಾನಿಯನ್ನು ಉಂಟುಮಾಡುವುದರಿಂದ ಕ್ಯಾನ್ಸರ್ ಮತ್ತು ಜನನ ಸಂಬಂಧಿ ಖಾಯಿಲೆಗಳು ಉಂಟಾಗುತ್ತವೆ. ½ | 1 |
| 21. | 'ಉಪಯೋಗಿಸಿ ಬಿಸಾಡುವ' ಅಭ್ಯಾಸವು ಮಣ್ಣಿನ ಮೇಲೆ ಉಂಟುಮಾಡುವ ದುಷ್ಪರಿಣಾಮಗಳನ್ನು ಪಟ್ಟಿಮಾಡಿ.<br>***ಅಥವಾ***<br>ನದಿ ತೀರಗಳಲ್ಲಿ ಅತಿ ಹೆಚ್ಚಿನ ತಾಪದ ಕುಲುಮೆಗಳನ್ನು ಬಳಸುವ ಕೈಗಾರಿಕೆಗಳನ್ನು ಸ್ಥಾಪಿಸಬಾರದು. ಏಕೆ ?<br>***ಉತ್ತರ :***<br>★ ಬಾಟಲ್‌ಗಳು, ಕ್ಯಾನ್‌ಗಳು ಇತರೆ ಪ್ಲಾಸ್ಟಿಕ್ ವಸ್ತುಗಳನ್ನು ಬಿಸಾಡಿದ ಮಣ್ಣು ಮಲಿನವಾಗುತ್ತದೆ.<br>★ ಹಾನಿಕಾರಕ ಕೀಟಗಳು, ಇಲಿಗಳು ಹಾಗೂ ಇತರೆ ಪೀಡಕಗಳಿಗೆ ಸಂತಾನೋತ್ಪತ್ತಿ ಕೇಂದ್ರಗಳಾಗುತ್ತವೆ.<br>★ ಪಾಲಿಥೀನ್ ಬ್ಯಾಗ್‌ಗಳು ಮುಂತಾದುವು ಮಣ್ಣಿನಲ್ಲಿ ಉಷ್ಣವನ್ನು ಹೆಚ್ಚಿಸುತ್ತವೆ.<br>★ ಮಣ್ಣಿನಲ್ಲಿರುವ ಸೂಕ್ಷ್ಮಜೀವಿಗಳು ನಾಶವಾಗಿ ಫಲವತ್ತತೆ ಕಡಿಮೆಯಾಗುತ್ತದೆ.<br>(ಯಾವುದಾದರೂ ಎರಡು) 1 + 1 | 2 |
| | ***ಅಥವಾ***<br>★ ಅತಿ ಉಷ್ಣದ ತ್ಯಾಜ್ಯಗಳನ್ನು ನದಿ ನೀರಿಗೆ ಸೇರಿಸಲಾಗುತ್ತದೆ.<br>★ ಜಲವಾಸಿ ಜೀವಿಗಳು ಉಷ್ಣದ ತೀವ್ರತೆಯಿಂದ ಸಾಯುತ್ತವೆ.<br>★ ಉಷ್ಣಮಾಲಿನ್ಯವಾಗುತ್ತದೆ.<br>(ಯಾವುದಾದರೂ ಎರಡು) 1 + 1 | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ದ್ವಿದಳ ಸಸ್ಯವೊಂದರ ಚಿತ್ರವನ್ನು ಬರೆಯಿರಿ. ಕೆಳಗಿನ ಭಾಗಗಳನ್ನು ಗುರುತಿಸಿ :<br>(i) ತಾಯಿಬೇರು<br>(ii) ಎಲೆ<br>***ಉತ್ತರ :***<br>ದ್ವಿದಳ ಸಸ್ಯದ ಚಿತ್ರ :<br><br><br>ಚಿತ್ರಕ್ಕೆ 1<br>ಭಾಗಕ್ಕೆ ½ + ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 27. | 'ಒಬ್ಬ ವ್ಯಕ್ತಿಯ ಜೀವಿತಾವಧಿಯಲ್ಲಿ ಹೃದಯದ ಸ್ನಾಯುವು ನಿರಂತರವಾಗಿ ಕಾರ್ಯನಿರ್ವಹಿಸಲು ಅದರ ರಚನೆಯು ಪೂರಕವಾಗಿದೆ'. ಈ ವಾಕ್ಯವನ್ನು ಸಮರ್ಥಿಸಿ.<br>***ಉತ್ತರ :***<br>*ಹೃದಯದ ಸ್ನಾಯುಗಳು :*<br>★ ಶಾಖೆಗಳಾಗಿ ಒಡೆಯುತ್ತವೆ<br>★ ಶಾಖೆಗಳು ಪರಸ್ಪರ ಹೊಂದಿಕೊಂಡಿವೆ<br>★ ಅನೈಚ್ಛಿಕ ಸ್ನಾಯುಗಳಾಗಿವೆ<br>★ ಲಯಬದ್ಧ ಸಂಕುಚನ ಮತ್ತು ವಿಕಸನಗಳನ್ನು ತೋರುತ್ತವೆ<br>★ ಪಟ್ಟೆ ಸಹಿತವಾಗಿವೆ<br>★ ಕೋಶಕೇಂದ್ರವನ್ನು ಹೊಂದಿವೆ<br>(ಯಾವುದಾದರೂ ನಾಲ್ಕು ಅಂಶಗಳು) 4 × ½ | 2 |
| 30. | "ಪುನರ್ ಸಂಯೋಜಿತ ಡಿಎನ್‌ಎ ತಂತ್ರಜ್ಞಾನದಿಂದ ಆಹಾರ ವಸ್ತುಗಳ ಗುಣಮಟ್ಟವು ಸುಧಾರಿಸಿದೆ". ಈ ಹೇಳಿಕೆಯನ್ನು ಸಮರ್ಥಿಸಿ.<br>***ಉತ್ತರ :***<br>★ ಸಂಕರಣದ ಮೂಲಕ ಉತ್ಕೃಷ್ಟ ತಳಿಗಳ ಉತ್ಪಾದನೆಯಾಗುವುದರಿಂದ ಸಸ್ಯ ಮತ್ತು ಪ್ರಾಣಿಗಳ ಉತ್ಪನ್ನಗಳ ಇಳುವರಿ ಹೆಚ್ಚಾಗುತ್ತದೆ.<br>★ ಕುಲಾಂತರಿ ಜೀವಿಗಳನ್ನು ಪಡೆಯುವ ಮೂಲಕ ಕೆಲವು ಜೀವಿಗಳ ಲಕ್ಷಣಗಳನ್ನು ಸಂರಕ್ಷಿಸಬಹುದು.<br>★ ಆಹಾರಕ್ಕೆ ಮಿಶ್ರ ಮಾಡುವ ಪ್ರತಿ ಉತ್ಕರ್ಷಕಗಳು, ರುಚಿಕಾರಕಗಳು, ವರ್ಣಕಾರಕಗಳು ಮತ್ತು ಸಿಹಿಕಾರಕಗಳ ಉತ್ಪಾದನೆ.<br>★ ಆಹಾರದ ಪೌಷ್ಠಿಕಾಂಶದ ಗುಣಮಟ್ಟದಲ್ಲಿ ಹೆಚ್ಚಳ.<br>★ ಅಂಗಾಂಶ ಕೃಷಿಯಿಂದ, ಕುಲಾಂತರೀಕರಣ ವಿಧಾನದ ಮೂಲಕ ಅಪೇಕ್ಷಿತ ಗುಣ ಹೊಂದಿರುವ ಸಸ್ಯದ ಅಭಿವೃದ್ಧಿ.<br>★ ಬದಲಾಗುತ್ತಿರುವ ಹವಾಮಾನದ ಪರಿಸ್ಥಿತಿಗಳಿಗೆ ಒಗ್ಗುವಂತಹ ಸಸ್ಯಗಳನ್ನು ಉತ್ಪಾದಿಸುವುದು ಮತ್ತು ಸೋಂಕುಗಳು, ರೋಗಕಾರಕಗಳು, ಪೀಡೆಗಳು ತಗುಲದಂತೆ ಸುಧಾರಿತ ರೀತಿಯಲ್ಲಿ ನಿರ್ವಹಿಸುವುದು.<br>(ಯಾವುದಾದರೂ ನಾಲ್ಕು ಅಂಶಗಳು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 32. | ಲೈಂಗಿಕ ರೋಗಗಳಿಗೆ ಹೋಲಿಸಿದಾಗ ಹಕ್ಕಿ ಜ್ವರದಿಂದ ಉಂಟಾಗುವ ಸಾವಿನ ಪ್ರಮಾಣ ಅಧಿಕ. ಏಕೆ ? | |
| | ***ಉತ್ತರ :*** | |
| | ★ ಗಾಳಿಯ ಮೂಲಕ ರೋಗಾಣುಗಳ ಹರಡುವಿಕೆ. | |
| | ★ ಸ್ಪರ್ಶ, ಎಂಜಲು, ಮಲದ ಮೂಲಕ ಹರಡುವುದು. | |
| | ★ ದೇಹದ ಹೊರಗೆ 10 ದಿನಕ್ಕೂ ಹೆಚ್ಚಿನ ಕಾಲ ಬದುಕಿರುವುದು. | |
| | (ಯಾವುದಾದರೂ ಎರಡು) ½ + ½ | |
| | *ಆದರೆ* | |
| | ಲೈಂಗಿಕ ರೋಗಕ್ಕೆ ಕಾರಣವಾದ ರೋಗಾಣು | |
| | ★ ದೇಹದ ಸ್ರವಿಕೆಗಳಲ್ಲಿ ಮಾತ್ರ ಕಂಡುಬರುತ್ತದೆ | |
| | ★ ದೇಹದ ಹೊರಗೆ ಹೆಚ್ಚು ಕಾಲ ಬದುಕಲಾರವು | |
| | ★ ಸೋಂಕಿತ ವ್ಯಕ್ತಿಗಳು ವೈದ್ಯೋಪಚಾರದಿಂದ ಹಲವು ವರ್ಷಗಳವರೆಗೆ ಬದುಕಬಹುದು | |
| | (ಯಾವುದಾದರೂ ಎರಡು) ½ + ½ | 2 |
| 34. | ನಿಯಾಂಡರ್‌ಥಾಲ್ ಮಾನವನ ಲಕ್ಷಣಗಳನ್ನು ಬರೆಯಿರಿ. | |
| | ***ಅಥವಾ*** | |
| | ಮಂಗೋಲಾಯಿಡ್ ಮಾನವನ ಲಕ್ಷಣಗಳನ್ನು ಬರೆಯಿರಿ. | |
| | ***ಉತ್ತರ :*** | |
| | ★ ಕುಳ್ಳಾದ, ಸದೃಢವಾದ ಹಾಗೂ ಬಲಶಾಲಿಯಾದ ದೇಹ ಹೊಂದಿದ್ದನು | |
| | ★ ದಟ್ಟವಾದ ಹುಬ್ಬು ಹೊಂದಿದ್ದನು | |
| | ★ ಜಾರುತಿರುವ ಹಣೆ | |
| | ★ ಚಿಕ್ಕದಾದ ಕೆನ್ನೆಗಳು | |
| | ★ ಮುಂದಕ್ಕೆ ಚಾಚಿದ ದವಡೆಗಳು | |
| | (ಯಾವುದಾದರೂ ನಾಲ್ಕು ಅಂಶಗಳು) 4 × ½ | 2 |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ★ ಹಳದಿ ಅಥವಾ ಕೆಂಪು ಛಾಯೆಯ ಚರ್ಮ<br>★ ದಪ್ಪವಾದ ತುಟಿಗಳು<br>★ ಅಗಲವಾದ ಮೂಗು<br>★ ನೇರವಾದ ಕೂದಲುಗಳು 4 × ½ | 2 |
| 36. | ಜರಿ ಸಸ್ಯಗಳ ಆರ್ಥಿಕ ಪ್ರಾಮುಖ್ಯತೆಯನ್ನು ಬರೆಯಿರಿ.<br>*ಉತ್ತರ :*<br>★ ಸೌಂದರ್ಯದ ಮೌಲ್ಯಕ್ಕಾಗಿ ಬೆಳೆಯಲಾಗುತ್ತದೆ<br>★ ಜರಿ ಸಸ್ಯಗಳ ಎಲೆಗಳನ್ನು ಹೂಗುಚ್ಛಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ<br>★ ಔಷಧಿಗಳ ತಯಾರಿಕೆಯಲ್ಲಿ<br>★ ಹಾರ್ಸ್‌ಡೇಲ್ ಮತ್ತು ಕ್ಲಬ್ ಮಾಸ್ ಜಾತಿಯ ಜರಿ ಸಸ್ಯಗಳು ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಉಂಟಾಗಲು ಕಾರಣವಾಗುತ್ತವೆ. 4 × ½ | 2 |
| 39. | ಕಾರಣ ಕೊಡಿ :<br>(i) ಗಾಯಿಟರ್ ಒಂದು ಸ್ಥಾನಿಕ ವ್ಯಾಧಿಯಾಗಿದೆ.<br>(ii) ಅಡ್ರಿನಲಿನ್ ಹಾರ್ಮೋನನ್ನು ತುರ್ತು ಪರಿಸ್ಥಿತಿಯ ಹಾರ್ಮೋನ್ ಎನ್ನುವರು.<br>*ಉತ್ತರ :*<br>(i) ಅಯೋಡಿನ್ ಕೊರತೆ ಇರುವ ಮಣ್ಣು ಮತ್ತು ನೀರು ಇರುವ ಪ್ರದೇಶಗಳಲ್ಲಿ ವಾಸಿಸುವ ಜನರು ಈ ವ್ಯಾಧಿಯಿಂದ ಹೆಚ್ಚು ತೊಂದರೆಗೆ ಒಳಪಡುತ್ತಾರೆ. 1<br>(ii) ಭಯ, ಆತಂಕ, ಕೋಪ ಮತ್ತು ಸಂವೇದನೆಗಳ ಒತ್ತಡ ಸ್ಥಿತಿಯಲ್ಲಿ ಇದು ದೇಹದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗಿ ದೇಹವು ತುರ್ತು ಪರಿಸ್ಥಿತಿಯನ್ನು ಎದುರಿಸಲು ಸಹಾಯ ಮಾಡುತ್ತದೆ. 1 | 2 |


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

44. ಎಚ್.ಐ.ವಿ. ರಚನೆಯನ್ನು ತೋರಿಸುವ ಚಿತ್ರವನ್ನು ಬರೆದು, ಕೆಳಗಿನ ಭಾಗಗಳನ್ನು ಗುರುತಿಸಿ :

(i) ಆರ್‌ಎನ್‌ಎ

(ii) ಪ್ರೋಟೀನ್ ತಿರುಳು

***ಉತ್ತರ :***




ಚಿತ್ರಕ್ಕೆ 1

ಭಾಗಕ್ಕೆ ½ + ½ 2

46. (a) ಹಾವಸೆ ಸಸ್ಯಗಳಿಗೆ ಸಂಬಂಧಿಸಿದಂತೆ ಸಂತತಿ ಪರ್ಯಾಯನವನ್ನು ವಿವರಿಸಿ.

(b) ಸೈಕಾಸ್ ಸಸ್ಯದ ಎರಡು ಲಕ್ಷಣಗಳನ್ನು ಬರೆಯಿರಿ.

***ಉತ್ತರ :***

(a) ★ ಪ್ರೌಢ ಸಸ್ಯವು ಲಿಂಗಾಣುಜನಕವಾಗಿದ್ದು ಗಂಡು ಮತ್ತು ಹೆಣ್ಣು ಲಿಂಗಾಣುಗಳು ಕ್ರಮವಾಗಿ ಆಂಥರೀಡಿಯಾ ಮತ್ತು ಆರ್ಕಿಗೋನಿಯಾ ಎಂಬ ರಚನೆಗಳಲ್ಲಿ ಉತ್ಪತ್ತಿಯಾಗುತ್ತವೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ★ ಲಿಂಗಾಣುಜನಕಗಳ ಲೈಂಗಿಕ ಸಂತಾನೋತ್ಪತ್ತಿಯಲ್ಲಿ ಉಂಟಾಗುವ ಯುಗ್ಮಜ ದ್ವಿಗುಣಿತ ಬೀಜಾಣು ಸಸ್ಯವಾಗಿ ಬೆಳೆಯುತ್ತದೆ.<br>★ ಬೀಜಾಣುಜನಕ ಸಸ್ಯವು ಸಂಖ್ಯಾಕ್ಷೀಣ ವಿಭಜನೆಯ ಮೂಲಕ ಏಕಗುಣಿತ ಬೀಜಾಣುಗಳನ್ನು ಉತ್ಪತ್ತಿ ಮಾಡುತ್ತದೆ.<br>★ ಬೀಜಾಣುಗಳು ಮೊಳೆತು ಏಕಗುಣಿತ ಲಿಂಗಾಣು ಸಸ್ಯಗಳಾಗಿ ಬೆಳೆಯುತ್ತವೆ. 2 | |
| | (b) ★ ಅನಾವೃತ ಬೀಜಸಸ್ಯಗಳಾಗಿವೆ / ಹಣ್ಣಿನ ಕವಚಗಳಿಲ್ಲದ ಬೀಜಗಳನ್ನು ಹೊಂದಿವೆ.<br>★ ಪೊದೆಗಳ ರೂಪದಲ್ಲಿ ಕಂಡುಬರುತ್ತವೆ.<br>★ ಶಂಕುಗಳನ್ನು ವಂಶಾಭಿವೃದ್ಧಿಯ ಭಾಗಗಳನ್ನಾಗಿ ಹೊಂದಿವೆ.<br>★ ಪ್ರೌಢ ಸಸ್ಯವು ಬೀಜಾಣುಜನಕವಾಗಿದೆ<br>★ ಗಂಡು ಶಂಕು, ಸೂಕ್ಷ್ಮ ಬೀಜಾಣು ಪತ್ರಕ ಹೊಂದಿದ್ದು ಇವು ಗಂಡು ಲಿಂಗಾಣುಗಳಿರುವ ಸೂಕ್ಷ್ಮ ಬೀಜಾಣುಗಳನ್ನು ಉತ್ಪಾದಿಸುತ್ತದೆ.<br>★ ಹೆಣ್ಣು ಶಂಕು, ಸ್ಥೂಲ ಬೀಜಾಣು ಪತ್ರಕ ಹೊಂದಿದ್ದು. ಹೆಣ್ಣು ಲಿಂಗಾಣುಗಳಿರುವ ಸ್ಥೂಲ ಬೀಜಾಣುಗಳನ್ನು ಉತ್ಪಾದಿಸುತ್ತದೆ.<br>(ಯಾವುದಾದರೂ ಎರಡು ಅಂಶಗಳು) 2 × ½ | 3 |
| 49. | ಈ ಕೆಳಗಿನ ಕ್ಷೇತ್ರಗಳಲ್ಲಿ ಜೈವಿಕ ತಂತ್ರಜ್ಞಾನದ ಅನ್ವಯಗಳನ್ನು ಬರೆಯಿರಿ :<br>(i) ಕೃಷಿ<br>(ii) ಆರೋಗ್ಯ ಮತ್ತು ಔಷಧ<br>(iii) ಆಹಾರ ಸಂಸ್ಕರಣೆ<br>**ಅಥವಾ**<br>ಕಾರ್ಲ್ ಕಾರೆನ್ಸ್‌ರವರ ಮಿಶ್ರ ತಳೀಕರಣ ಪ್ರಯೋಗದಲ್ಲಿ $F_2$ ಪೀಳಿಗೆಯ ಫಲಿತಾಂಶಗಳನ್ನು ತೋರಿಸುವ ಚಕ್ಕರ್ ಬೋರ್ಡ್ ರಚಿಸಿ. ಅದು 'ಅಪೂರ್ಣ ಪ್ರಾಬಲ್ಯ' ನಿಯಮವನ್ನು ಹೇಗೆ ದೃಢೀಕರಿಸುತ್ತದೆ ? | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

*ಉತ್ತರ :*

(i) *ಕೃಷಿ :* ಸಸ್ಯ ಮತ್ತು ಪ್ರಾಣಿ ಸಂಕುಲಗಳ ಅಭಿವೃದ್ಧಿ ಮತ್ತು ಉಪದ್ರವಕಾರಿಗಳು ಹಾಗೂ ರೋಗಕಾರಕಗಳ ನಿಯಂತ್ರಣ.

(ii) *ಆರೋಗ್ಯ ಮತ್ತು ಔಷಧ :* ಆಂಟಿ ಬಯೋಟಿಕ್‌ಗಳು, ವ್ಯಾಕ್ಸೀನ್‌ಗಳು ಮತ್ತು ಕೃತಕ ಹಾರ್ಮೋನ್‌ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸುವುದು.

(iii) *ಆಹಾರ ಸಂಸ್ಕರಣೆ :* ರುಚಿಕಾರಕಗಳು, ಸಂರಕ್ಷಕಗಳು, ವರ್ಣಕಗಳು ಮತ್ತು ಸುಧಾರಿತ ಆಹಾರದ ಸಸ್ಯಗಳ ಉತ್ಪಾದನೆ. 1 + 1 + 1 — 3

***ಅಥವಾ***

| | R | W |
|---|---|---|
| R | RR<br>ಕೆಂಪು | RW<br>ಗುಲಾಬಿ |
| W | RW<br>ಗುಲಾಬಿ | WW<br>ಬಿಳಿ |


1

★ ವಂಶವಾಹಿಗಳು RR ಮತ್ತು WW ಆಗಿದ್ದಾಗ ಏಕರೂಪಿಯಾಗಿದ್ದಾಗ ಕ್ರಮವಾಗಿ ಕೆಂಪು ಮತ್ತು ಬಳಿ ಬಣ್ಣದ್ದಾಗಿ ಕಾಣಿಸಿಕೊಳ್ಳುತ್ತದೆ.

★ ಭಿನ್ನರೂಪ ಸ್ಥಿತಿಯಲ್ಲಿ ( RW ) ಎರಡೂ ವಂಶವಾಹಿಗಳು ಪ್ರಕಟವಾಗುತ್ತವೆ.

★ ಆದರೆ ಕೆಂಪು ಅಥವಾ ಬಿಳಿಯ ಬಣ್ಣಗಳ ಹೂವುಗಳು ಉತ್ಪತ್ತಿಯಾಗದೆ, ಇವುಗಳ ನಡುವಣ ಬಣ್ಣವಾದ ಗುಲಾಬಿ ಬಣ್ಣದ ಹೂವುಗಳು ಉಂಟಾಗುತ್ತವೆ.

ಆದ್ದರಿಂದ ಅಪೂರ್ಣ ಪ್ರಾಬಲ್ಯವನ್ನು ಧೃಡೀಕರಿಸುತ್ತದೆ. 2 — 3

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 52. | ಮಾನವನ ಕಣ್ಣಿನ ನೀಳ ಛೇದ ನೋಟದ ಚಿತ್ರವನ್ನು ಬರೆದು ಕೆಳಗಿನ ಭಾಗಗಳನ್ನು ಗುರುತಿಸಿ :<br>(i) ವರ್ಣ ಪಟಲ<br>(ii) ಅಕ್ಷಿ ಪಟಲ<br>***ಉತ್ತರ :***<br><br><br>ಚಿತ್ರಕ್ಕೆ 3<br>ಭಾಗಗಳಿಗೆ ½ + ½ | 4 |